<u>ಸಾಕ್ಷಿಯನ್ನು ದಿನಾಂಕ **19-08-2022** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಪಾಟಿ ಸವಾಲು ತಕರಾರು ಅರ್ಜಿದಾರರ ಪರ ಶ್ರೀ ಬಿ ವಿ ಎಂ ವಕೀಲರಿಂದ ಃ</u>

ತಕರಾರು ಅರ್ಜಿದಾರರು ನಂಃ1 ಮತ್ತು 2 ತಾಯಿ ಮತ್ತು ಮಗಳು ಎಂದರೆ ಸರಿ. 3 ನೇ ತಕರಾರು ಅರ್ಜಿದಾರ 2 ನೇ ಅರ್ಜಿದಾರಳ ಮಗ ಅಂದರೆ ಸರಿ. ಋಣದಾರಕ ದಶರಥ ರಾಮಯ್ಯ 1 ನೇ ತಕರಾರು ಅರ್ಜಿದಾರಳ ಗಂಡ ಮತ್ತು 2 ನೇ ತಕರಾರು ಅರಜಿದಾರರ ತಂದೆ ಅಂದರೆ ಸರಿಯಲ್ಲ. ಋಣದಾರಕ 1 ನೇ ತಕರಾರು ಅರ್ಜಿದಾರಳ ಮಗ ಅಂದರೆ ಸರಿ. 3 ನೇ ತಕರಾರು ಅರ್ಜಿದಾರ ಋಣದಾರಕನ ಮಗ ಅಂದರೆ ಸರಿ. ಮೋಹನ್ ರಾವ್ ಇವರು 1 ನೇ ತಕರಾರು ಅರ್ಜಿದಾರರ ಗಂಡ ಮತ್ತು ಋಣದಾರಕನ ತಂದೆ ಎಂದರೆ ಸರಿ. ಇವರ ಕುಟುಂಬ ನಮಗೆ 10-112 ವರ್ಷಗಳಿಂದ ಪರಿಚಯ. ಈ ಪ್ರಕರಣ ನಡೆಯುವಾಗ ನನ್ನ ತಂದೆ ತೀರಿಕೊಂಡ ನಂತರ ನಾನು ಈ ದಾವೆಯಲ್ಲಿ ಸೇರ್ಪಡೆಗೊಂಡಿದ್ದೇನೆ ಎಂದರೆ ಸರಿ. ನನ್ನ ತಂದೆ ನಡೆಸಿದ್ದರ ದಾವೆ ಮತ್ತು ಈ ಅಮಲ್ಜಾರಿ ಪ್ರಕರಣದ ಬಗ್ಗೆ ಮಾಹಿತಿ ಇದೆ. ದಾವಾ ಜಮೀನು ಸರ್ವೇ ನಂಃ 33/A ಇದ್ದು ಒಟ್ಟು ಕ್ಷೇತ್ರ 3 ಎಕರೆ 15 ಗುಂಟೆ ಇದ್ದು ಆ ಪೈಕಿ 2 ಎಕರೆ 15 ಗುಂಟೆ ದಾವಾ ಜಮೀನು ಇದೆ. ದಾವಾ ಸರ್ವೇ ನಂಬರಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಾವಾ ಜಮೀನಿನ ಒಟ್ಟು ಕ್ಷೇತ್ರವನ್ನು ಮೊದಲಿಗೆ ಪಟ್ವಾರಿ ಮೋಹನ್ ರಾವ್ ಖರೀದಿಸಿದ್ದಾರೆ ಎಂದರೆ ಸರಿ. ಮೋಹನ್ ರಾವ್ ಇವರ ಹೆಸರಿನಲ್ಲಿ ಮೊದಲಿಗೆ ಪಹಣಿ ಇತ್ತು ಎಂದರೆ ಸರಿ. ಮೋಹನ್ ರಾವ್ ಜೀವಿತಾವಧಿಯಲ್ಲಿ ತಕರಾರು ಅರ್ಜಿದಾರ 1, 2 ಮತ್ತು ಋಣದಾರಕ ಕೂಡಿಯೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ದಿಃ 05-01-2006 ರಂದ್ದು ಪಟ್ವಾರಿ ಮೋಹನ್ ರಾವ್ ಅವರು ತೀರಿಕೊಳ್ಳುತ್ತಾರೆ ಎಂದರೆ ಸರಿ. ಪಟ್ವಾರಿ ಸೀತಾರಾಮಯ್ಯ ಇವರು ತೀರಿಕೊಂಡ ನಂತರ ತಕರಾರು ಅರ್ಜಿದಾರ 1 ಮತ್ತು 2 ಹಾಗೂ ಋಣದಾರಕ ಅವರ ನೇರ ವಾರಸುಧಾರರು ಅಂದರೆ ಸರಿ. ಇವರೆಲ್ಲಾ ಜಂಟಿಯಾಗಿಯೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಪಟ್ವಾರಿ ಮೋಹನ್ ರಾವ್ ಇವರು ತೀರಿಕೊಳ್ಳುವಾಗ ಈ ಒಟ್ಟು ಕ್ಷೇತ್ರವನ್ನು ತನ್ನ ಹೆಂಡತಿ, ಮಗ ಹಾಗೂ ಮಗಳಿಗೆ ಹಾಗೇ ಬಿಟ್ಟು ತೀರಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಮೋಹನ್ ರಾವ್ ಇವರು ತನ್ನ

ಜೀವಿತಾವಧಿಯಲ್ಲಿ ಒಟ್ಟು ಕ್ಷೇತ್ರದ ಪೈಕಿ ಒಂದು ಎಕರೆ ಜಮೀನನ್ನು ರುದ್ರಮುನಿ ಸ್ವಾಮಿಗಳಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಮೋಹನ್ ರಾವ್ ಇವರು ಉತ್ತರದ ಕಡೆಗೆ ಇರುವ 1 ಎಕರೆ ಜಮೀನನ್ನು ಮಾರಾಟ ಮಾಡಿ ಉಳಿಕೆ ಜಮೀನನ್ನು ಹಾಗೇ ಇಟ್ಟುಕೊಂಡು ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನು ಮೋಹನ್ ರಾವ್ ತೀರಿಕೊಂಡ ನಂತರ ತಕರಾರು ಅರ್ಜಿದಾರ ನಂಃ 1 ರಿಂದ 3 ಹಾಗೂ ಋಣದಾರಕನ ಜಂಟಿ ಕುಟುಂಬದ ಸ್ವತ್ತುಎಂದರೆ ಸರಿ. ಸಾಕ್ಷಿ ಮುಂದುವರೆದು 2ನೇ ತಕರಾರು ಅರ್ಜಿದಾರರನ್ನು ಮದುವೆ ಮಾಡಿಕೊಟ್ಟಿದ್ದರು ಹಾಗೂ ಅವರಿಗೆ ಬೇರೆ ಜಮೀನು ನೀಡಿದ್ದಾರೆ ಅಂತ ನುಡಿಯುತ್ತಾರೆ.

<u>ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.</u>

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.